

# ಕುಂಭ ಮೇಳ ಅಲ್ಲ; ಕುಂಬಳ ಮೇಳ!



ಅಮೆರಿಕದಲ್ಲಿ ಅಕ್ಟೋಬರ್ ಬಂತೆಂದರೆ ಕುಂಬಳ ಮೇಳ ನಡೆಯುತ್ತದೆ. ರಾಶಿ ರಾಶಿ ಕುಂಬಳ ವಿಭಾಗಕ್ಕೆ ಸೇರಿದ ವಿವಿಧ ರೀತಿಯ ಕುಂಬಳ, ಸೋರೆ ಕಾಯಿ, ಚೀನೀ ಕಾಯಿಗಳನ್ನು ಸ್ಥಳೀಯ ಸೂಪರ್ ಮಾರ್ಕೆಟ್ ಗಳಲ್ಲಿ, ಚರ್ಚ್, ಶಾಲೆ ಹಾಗೂ ಮನೆಯ ಅಂಗಳಗಳಲ್ಲಿ ನೋಡಬಹುದು.

ಅನಿವಾಸಿಯರಿಂದ ಕೂಡಿದ ಅಮೆರಿಕದಲ್ಲಿ ಈ ಕುಂಬಳಗಳನ್ನು ಜೋಡಿಸುವ ಸಂಸ್ಕೃತಿ ಪ್ರಾರಂಭವಾಗಿದ್ದು ಐರ್ಲಂಡಿನಿಂ ಬಂದ ಅನಿವಾಸಿಯರಿಂದ. ಅಲ್ಲಿ ಹೊಸ ಕೊಯಿಲಿನಿಂದ ಬಂದ ಗೆಡ್ಡೆಕೋಸು (ನವಿಲುಕೋಲು) ಅಥವಾ ಆಲೂಗಡ್ಡೆಯನ್ನು ಮಕ್ಕಳು ಕೊರೆದು ಅದರಲ್ಲಿ ಸಣ್ಣ ದೀಪವನ್ನು ಹಚ್ಚಿ ಇಡುತ್ತಿದ್ದರಂತೆ. ಕ್ರಮೇಣ ಕುಂಬಳದ ಗಾತ್ರ ಹಾಗೂ ಕೊರೆಯಲು ಸುಲಭವಾಗಿದ್ದರಿಂದ ಜನರ ಗಮನ ಕುಂಬಳ ಕಾಯಿಯ ಮೇಲೆ ಹೋಯಿತು.

ಟೆಕ್ಸಾಸ್ ರಾಜ್ಯದ ಡಲ್ಲಾಸ್ ನಗರದ ಸ್ಥಳೀಯ ಸಸ್ಯ ಉದ್ಯಾನವನದಲ್ಲಿ ವಸಂತ ಋತುವಿನಲ್ಲಿ ಫಲಪುಷ್ಪ ಪ್ರದರ್ಶನವಾದರೆ ಅಕ್ಟೋಬರ್‌ನಲ್ಲಿ ಕುಂಬಳ ಮೇಳ ಅಥವಾ ಕುಂಬಳ ಪರಸೆಯೆಂದೆ ಕರೆಯಬಹುದು. ರಾಷ್ಟ್ರದಲ್ಲೇ ಅತ್ಯುತ್ತಮ ಕುಂಬಳ ಮೇಳ ಡಲ್ಲಾಸ್ ಅರ್ಬೋರೆಟಮ್ ದು ಎನ್ನುವ ಹೆಗ್ಗಳಿಕೆ ಇದೆ.

ಈ ಕುಂಬಳ ಮೇಳ ಅಂದಾಜು 65 ಎಕರೆ ಪ್ರದೇಶದಲ್ಲಿ ನಡೆಯುತ್ತದೆ. ವಿವಿಧ ಆಕಾರ ಹಾಗೂ 52 ವಿವಿಧ ಬಗೆಯ 75,000 ಕುಂಬಳಗಳನ್ನು ಫ್ಲೋರಿಡಾದ ಪಂಪ್‌ಕಿನ್ ಪೈಲ್ ಎನ್ನುವ ಕುಟುಂಬದ ಒಡೆತನದ ಜಮೀನಿನಿಂದ ಕಳೆದ 10 ವರ್ಷಗಳಿಂದ ಈ ಸಸ್ಯ ಉದ್ಯಾನವನಕ್ಕೆ ತರುತ್ತಿದ್ದಾರೆ. ಇದನ್ನು ಮನೆಗಳ ಹಾಗೆ, ಅಂಗಡಿಗಳ ಹಾಗೆ, ಅಲ್ಲದೆ ಟೆಕ್ಸಾಸ್ ರಾಜ್ಯದ ನಕ್ಷೆಯ ಹಾಗೆ ಜೋಡಿಸಿದ್ದಾರೆ. ಜನರು ಗುಂಪು ಗುಂಪಾಗಿ ಸಂಸಾರದೊಂದಿಗೆ ಹಾಗೂ ಮಕ್ಕಳೊಂದಿಗೆ ಬಂದು ಚಿತ್ರಗಳನ್ನು ತೆಗೆಸಿಕೊಳ್ಳುವುದನ್ನು ನೋಡಲು ಸೊಗಸು. ಕೊಯಿಲಿನ ಸಮಯವಾದ್ದರಿಂದ ಅಲ್ಲಲ್ಲಿ ಒಣ ಹುಲ್ಲನ್ನು ಸುರಿದು ಯಾವುದಾದರು ಜಮೀನಿಗೆ ಭೇಟಿ ಕೊಟ್ಟಂಥ ಅನುಭವ ಉಂಟಾಗುತ್ತದೆ. ಮನೆಯ ಅಂಗಳವನ್ನು ಅಲಂಕರಿಸಲೋ ಅಥವಾ ಮಕ್ಕಳು ಕುಂಬಳವನ್ನು ಕೊರೆದು ಅದರಲ್ಲಿ ದೀಪಗಳನ್ನು ಜೋಡಿಸಲು ಇಲ್ಲಿ ಬೇಕಾದ ಆಕೃತಿಯ ಕುಂಬಳವನ್ನು ಖರೀದಿಸಬಹುದು. ಒಟ್ಟಿನಲ್ಲಿ ಈ ಉದ್ಯಾನವನದ ಭೇಟಿ ಮನಸಿಗೆ ಮುದ ನೀಡುವ ಹಾಗೂ ಕಣ್ಮನ ತಣಿಸುವ ಅನುಭವ.

■ ಮೀನಾ ಭಾರದ್ವಾಜ್